## ಪರ್ದಾ & ಪಾಲಿಗಮಿ

# ಮಹಿಳೆಯರ ಅಂತರಂಗದ ಬದುಕಿಗೆ ಕನ್ನಡಿ

● ನೇಮಿಚಂದ್ರ

1944ರಲ್ಲಿ ಮುದ್ರಿತವಾಗಿದ್ದ ಇಂಗ್ಲಿಷ್ ಕಾದಂಬರಿ, 'ಪರ್ದಾ & ಪಾಲಿಗಮಿ' –ಇದೀಗ ಮೊದಲ ಬಾರಿಗೆ ಕನ್ನಡದಲ್ಲಿ ಲಭ್ಯವಾಗಿದೆ. ಇದನ್ನು ರಚಿಸಿದವರು ಬೆಂಗಳೂರಿನ ಇಕ್ಬಾಲುನ್ನೀಸಾ ಹುಸೇನ್ ಎಂಬ ಮುಸ್ಲಿಂ ಮಹಿಳೆ ಎಂದು ತಿಳಿದಾಗ ಅಚ್ಚರಿಯಾಯಿತು.

ಈ ಹೊತ್ತಿಗೆಯ ಚಾರಿತ್ರಿಕ ಮಹತ್ವವನ್ನು ತಿಳಿಯಲು, ಒಂದಿಷ್ಟು ಮಹಿಳಾ ಬರಹದ ಹಿನ್ನೆಲೆಯನ್ನು ನೀಡಬೇಕಾಗುತ್ತದೆ. ಕಳೆದ ಶತಮಾನದ ಮೊದಲರ್ಧ. ಅನಕ್ಷರತೆ, ಹೊರಜಗತ್ತಿನ ಅನುಭವದ ಕೊರತೆ, ಸ್ತ್ರೀಯರನ್ನು ತೀವ್ರವಾಗಿ ಕಾಡಿದ ಕಾಲ. ಅರಿವು ಮೂಡುವ ಮೊದಲೇ ಕೊರಳಲ್ಲಿ ಮಾಂಗಲ್ಯ, ಬಾಲ್ಯ ಜಾರುವ ಮೊದಲೇ ಮಡಿಲಲ್ಲಿ ಮಕ್ಕಳು. ಬಿಡುವಿಲ್ಲದ ಮನೆಗೆಲಸ, ನಿಯಂತ್ರಣವಿಲ್ಲದ ಬಸಿರು ಬಾಣಂತನಗಳಲ್ಲಿ, ಹೊಸಿಲು ದಾಟದ ಸೀಮಿತತೆಯಲ್ಲಿ, ಸಂಸಾರ ಸಂಪ್ರದಾಯಗಳ ಬಿಗಿಮುಷ್ಟಿಯಲ್ಲಿ ಅವರ ಬದುಕು ಸವೆದು ಹೋಗುತ್ತಿತ್ತು. ಇಂತಹ ಕಾಲದ ಪರಿಮಿತಿಯಲ್ಲೂ ಅರಳಿದ ಲೇಖಕಿಯರಿದ್ದರು ಎಂಬುದೇ ಬೆರಗಿನ ಸಂಗತಿ.

1980ರ ದಶಕ, ಚರಿತ್ರೆಯ ಪುಟಗಳಲ್ಲಿ ಮರೆತು ಹೋದ ಮಹಿಳಾ ಸಾಹಿತ್ಯವನ್ನು ಹುಡುಕಿ ಹೊರ ತೆಗೆದು, ಮಹಿಳಾ ಪರಂಪರೆಯನ್ನು ಗುರುತಿಸಿಕೊಳ್ಳುವುದು ಲೇಖಕಿಯರಾಗಿ ನಮ್ಮೆದುರಿಗಿದ್ದ ಬಲು ದೊಡ್ಡ ಸವಾಲು. 'ಕರ್ನಾಟಕ ಲೇಖಕಿಯರ ಸಂಘ'ದಿಂದ ಕಳೆದು ಹೋದ ಇತಿಹಾಸದ ಕೊಂಡಿಗಳನ್ನು ಕೂಡಿಸಲು ಹೊರಟೆವು. 'ಗಿಡವೆಂದು ಬಗೆದೆಯೋ ಹೆಣ್ಣು ಜನ್ಮದ ಒಡಲ, ಫಲಗಳನ್ನು ಸೃಜಿಸುವುದಕೆ?' ಎಂದು ಬ್ರಹ್ಮನನ್ನು ತರಾಟೆಗೆ ತೆಗೆದುಕೊಂಡ ಬೆಳಗೆರೆ ಜಾನಕಮ್ಮನ ಬದುಕು–ಬರಹವನ್ನು 1988ರಲ್ಲಿ ಲೇಖಕಿಯರ ಸಂಘ ಹೊರತಂದಿತು. ಇದರ ಬೆನ್ನಿಗೇ ಆರ್. ಕಲ್ಯಾಣಮ್ಮ ಮತ್ತು ಶ್ಯಾಮಲಾದೇವಿ ಅವರ ಬದುಕು–ಬರಹಗಳನ್ನು ಕುರಿತ ಕೃತಿಗಳು ಹೊರಬಂದವು. ಇತಿಹಾಸದ ಹಿಮದಲ್ಲಿ ಕಳೆದು ಹೋಗಿದ್ದ ಒಬ್ಬೊಬ್ಬ ಲೇಖಕಿಯನ್ನು ಹುಡುಕಿ ಹೋಗುವುದು ಅಗಾಧ ಅಧ್ಯಯನ ಮತ್ತು ಪರಿಶ್ರಮದ ಕೆಲಸವಾಗಿತ್ತು.

ಲೇಖಕಿಯರ ಸಂಘದಾಚೆಗೂ ಮಹಿಳಾ ಪರಂಪರೆಯನ್ನು ಕಟ್ಟಿಕೊಡುವ ಕೆಲಸಗಳು ನಡೆದವು. ನಂಜನಗೂಡು ತಿರುಮಾಲಾಂಬಾ ಅವರ ಚರಿತ್ರೆ ಬೆಳಕಿಗೆ ಬಂದಿತ್ತು. ಕಳೆದು ಹೋದ ಹೆಣ್ಣ ಕತೆಗಳು ಯಾವ ಯಾವ ಗೂಡಿನಿಂದಲೋ ಹೊರಬಂದವು. ಕಳೆದ ಶತಮಾನದ ತಿರುವಿನಲ್ಲಿ, ಮತ್ತೋರ್ವ ಅಜ್ಞಾತ ಲೇಖಕಿ ದೇವಾಂಗನಾ ಶಾಸ್ತ್ರಿ ಅವರ ಕತೆಗಳು, ಆಕೆ ತೀರಿಕೊಂಡ ಅರ್ಧ ಶತಮಾನಕ್ಕೂ ಹೆಚ್ಚು ಕಾಲದ ಅನಂತರ, ಪುಸ್ತಕದ ರೂಪದಲ್ಲಿ ಬೆಳಕು ಕಂಡಿತ್ತು. ಅದೇ ಹೊತ್ತಿನಲ್ಲಿ ಸರಸ್ವತಿಬಾಯಿ ರಾಜವಾಡೆ ಅವರ ಬದುಕಿನ ಕೆಲವು ಪುಟಗಳನ್ನು ಹಿಡಿದಿಟ್ಟು ಮಹಿಳಾ ಸಾಹಿತ್ಯ ಪರಂಪರೆಯ